ವಿ. ಹಮೀದ್, ವಿಟ್ಲ
ಪತ್ನಿ ದಿನಕ್ಕೊಂದು ಕಿಸ್ ಕೇಳುತ್ತಿದ್ದಾಳಲ್ಲಾ, ಏಕಿರಬಹುದು?



ಏನು ತಿಂದು, ಕುಡಿದು ಬಂದಿದ್ದೀರೆಂದು ಲಿಪ್ ಟೆಸ್ಟ್ ನಿಂದ ತಿಳಿಯಲು.

ಎನ್.ಕೆ. ಹೆಬ್ಬಾರ್, ಕೋಣೆ
ಮನಸ್ಸು ಮಾನವನ ಅಧೀನ ಅಲ್ಲ. ಮಾನವ ಮನಸ್ಸಿನ ಅಧೀನ. ನಿಮ್ಮ ಇಂಗಿತ?
ಮನಸ್ಸು, ಮಾನವ ಎರಡೂ ಪರಿಸ್ಥಿತಿಯ ಅಧೀನ.

ರಮೇಶ್, ಹನುಮನಾಳು
ಸ್ಥಿತಿಗೂ, ಪರಿಸ್ಥಿತಿಗೂ, ಮನಃಸ್ಥಿತಿಗೂ ಅಂತರವೇನು?
ಸ್ಥಿತಿ ನದಿ; ಪರಿಸ್ಥಿತಿ ಪ್ರವಾಹ; ಮನಃಸ್ಥಿತಿ ಹುಚ್ಚುಹೊಳೆ.

ವಿಜಯ್‌ಕುಮಾರ್ ಎಚ್.ಕೆ. ರಾಯಚೂರು
ಬ್ಯಾಟ್ ಹಿಡಿದವನಿಗೆ ಕಪ್ಪು; ನೇಗಿಲು ಹಿಡಿದವನಿಗೆ ಚಿಪ್ಪು. ಏಕೆ ಹೀಗೆ?
ರೇಸ್ ಕುದುರೆಗೆ ಪುಷ್ಟಿ, ಶ್ರಮದ ಕತ್ತೆಗೆ ಕಷ್ಟ ನಿಜಜೀವನದ ರೀತಿ.

ಬೂಕನಕೆರೆ ವಿಜೇಂದ್ರ, ಮೈಸೂರು
ಸರ್ವರೋಗಕ್ಕೂ ಸಾರಾಯಿ ಮದ್ದು. ಕೊರೊನಾಕ್ಕೆ?




ಅಷ್ಟೇ ಕೆಟ್ಟ ವಾಸನೆಯ ಸ್ಯಾನಿಟೈಝರ್.

ನಾಗೇಂದ್ರ ಗಂಗೊಳ್ಳಿ, ಬೆಂಗಳೂರು
ಹೆಂಡತಿ ಔಟ್ ಆಫ್ ಸಿಲಬಸ್ ಪ್ರಶ್ನೇನೇ ಕೇಳ್ತಾಳಲ್ಲಾ ರಾಮ್…?
ಹಾಗೇನಿಲ್ಲ. ನೀವು 35 ಮಾರ್ಕ್ಸ್‌ಗೆ ಮಾತ್ರ ಓದಿರೋದ್ರಿಂದ ನಿಮಗೆ ಫುಲ್ ಸಿಲಬಸ್ ಗೊತ್ತಿಲ್ಲ ಅಷ್ಟೆ.

ಹೆಚ್.ವೈ. ಲಲಿತ, ಬೆಂಗಳೂರು
ಸತ್ಯನಾರಾಯಣ ಹೆಸರಿನವರೂ ಸತ್ಯ ಹೇಳಲು ಹೆದರುತ್ತಾರೆ. ಏಕೆ?
ಸತ್ಯ ಹೇಳಿದರೆ ನಾರಾಯಣ ನಾರಾಯಣ ಎನ್ನುತ್ತಾ ತಂಬೂರಿ ಹಿಡಿದು ಅಲೆಯುವ ಸ್ಥಿತಿ ಬಂದೀತೆಂದು.

ಮಲ್ಲಿಕಾರ್ಜುನ, ಸುರಧೇನುಪುರ
ಟ್ರೋಲ್ ಆದಂತೆಲ್ಲ ಪೆಟ್ರೋಲ್ ಡೀಸೆಲ್ ಬೆಲೆ ಏರಿಸುತ್ತಿರುವ ಬಗ್ಗೆ ಏನಂತೀರಾ?
ಆಡಳಿತದ ಕಂಟ್ರೋಲ್ ತಪ್ಪಿರುವುದರಿಂದ ಶ್ರೀಸಾಮಾನ್ಯನ ಫ್ಯೂನರೋಲ್ ಆಗುತ್ತಿದೆ.

ಹೆಚ್.ವಿ. ಶ್ರೀಧರ್, ಬೆಂಗಳೂರು
ಒಂದು ದೇಶ ಒಂದೇ ಭಾಷೆ. ಒಂದು ಗಂಡು ಒಂದೇ ಹೆಣ್ಣು ಎಂಬ ನಿಯಮಗಳನ್ನು ಜಾರಿಗೆ ತಂದುಬಿಟ್ಟರೆ?
ಒಂದು ದೇಶ ಒಬ್ಬರ ಬಗ್ಗೆಯೇ ದ್ವೇಷ ಜಾರಿಗೆ ಬರುತ್ತದೆ.

ಟೈಲರ್ ಮೋಹನ್, ಬೆಂಗಳೂರು
ದಪ್ಪಗಿರುವವಳು, ಕಪ್ಪಗಿರುವವಳು, ಬೆಳ್ಳಗಿರುವವಳು, ತೆಳ್ಳಗಿರುವವಳು ಸಿಕ್ಕಾಳು. ತೆಪ್ಪಗಿರುವವಳು ಸಿಗುತ್ತಾಳಾ?
ಸಿಕ್ಕಾಳು. ಏನು ಪ್ರಯೋಜನ? ಜೋಡಿ ವಾಲಗ ಇದ್ದರೇನೇ ಸಂಸಾರ.

ಆರ್. ಮಧುಸೂದನ್, ಹಾಸನ
ಮನೆಯಲ್ಲಿ ಮೀನು ಸಾಕುವ ಮಕ್ಕಳಿಗೆ ತಂದೆತಾಯಿಯರನ್ನು ಸಾಕಬೇಕೆಂಬ ಬುದ್ಧಿ ಏಕಿರುವುದಿಲ್ಲ?
ಮೀನು ಸಾಕೀ ಸಾಕೀ ಮೀನ್ ಮೆಂಟಾಲಿಟಿ ಬಂದಿರುತ್ತಲ್ಲ!

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ಫೆಬ್ರುವರಿ ತಿಂಗಳಲ್ಲಿ ಇಪ್ಪತ್ತೆಂಟು ದಿನಗಳೇ ಬರುತ್ತವೆ. ಯಾಕೆ ಸರ್?
ಅಕ್ಕಪಕ್ಕದ ಜನವರಿ, ಮಾರ್ಚ್‌ಗಳು ಒಂದೊಂದು ದಿನವನ್ನು ಎನ್‌ಕ್ರೋಚ್ ಮಾಡಿಕೊಂಡವಂತೆ.

ಎನ್. ಗೋಪಾಲರಾವ್, ಬೆಂಗಳೂರು
ಮಂತ್ರಿ, ಮುಖ್ಯಮಂತ್ರಿಗಳಿಗೆ ಇರಬೇಕಾದ ಅರ್ಹತೆ ಏನು?
ಗಿಣಿಯಿಂದ ಹೆಕ್ಕಿ, ಹದ್ದಿಗೆ ಕುಕ್ಕಿ, ಗದ್ದುಗೆಗೆ ಉಡದಂತೆ ಅಂಟಿಕೊಳ್ಳುವ ಭಂಡತನವಿದ್ದರೆ ಸಾಕು.

## ಬಹುಮಾನಿತ ಪ್ರಶ್ನೆ

ಅನಸೂಯ ಟಿ. ಕೇದಿಗೆಮನೆ
ದೇವಸ್ಥಾನಗಳಲ್ಲಿ ಗಂಡಸರು ದೇವರ ದರ್ಶನ ಪಡೆಯಲು ಏಕೆ ಅಂಗಿ ಬಿಚ್ಚಬೇಕು?
ದೇವನೇನಾದರೂ ಭಕ್ತಿಯನ್ನು ಪ್ರಕಟಿಸು ಎಂದರೆ ಹನುಮನಂತೆ ಎದೆ ಬಗೆದು ತೋರಿಸಲು

ಕಾವ್ಯಶ್ರೀ ಪತ್ರಿಮಠ, ಶೋರಾಪುರ
ಹುರುಳಿಗೂ, ಮರಳಿಗೂ ಅಂತರವೇನು?
ಮರಳು ಪ್ರಕೃತಿಗೆ ಶೋಭೆ, ಹುರುಳಿ ದೇಹಪ್ರಕೃತಿಗೆ ಶೋಭೆ.

ಕೆ. ಗೋವಿಂದಾಚಾರಿ, ಮೈಸೂರು
ದುಬಾರಿ ಬೆಲೆ ಕೊಟ್ಟು ತಂದ ಹಾಸಿಗೆಯ ಮೇಲೆ ಮಲಗಿದರೂ ನಿದ್ದೆ ಬರುತ್ತಿಲ್ಲವಲ್ಲಾ…?
ಹೊದ್ದಿರುವ ಚಿಂತೆಯ ಹೊದಿಕೆಯನ್ನು ಅತ್ತ ಬಿಸಾಡಿ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಹುಟ್ಟುಹಬ್ಬಕ್ಕೂ, ಕೇಕ್ ಕತ್ತರಿಸುವುದಕ್ಕೂ ಏನು ಸಂಬಂಧವಯ್ಯಾ?



ಕೇಕಿನಲ್ಲಿ ಚಾಕು ಸಾಗುವಷ್ಟೇ ಸಲೀಸಾಗಿ ವ್ಯಕ್ತಿಯ ಬದುಕು ಸಾಗಲೆಂಬ ಆಶಯದ ದ್ಯೋತಕವಯ್ಯಾ.

ಎನ್.ವಿ. ಶ್ರೀನಿವಾಸ್, ಮೈಸೂರು
ಮಹಾಭಾರತದ ಖಾಂಡವ ದಹನದ ಸಂದರ್ಭದಲ್ಲಿ ಪರಿಸರವಾದಿಗಳು ಇರಲಿಲ್ಲವೆ?
ಇದ್ದರಲ್ಲ. ಅವನೇ ಮುಂದೆ ಸರ್ಪಾಸ್ತ್ರವಾಗಿ ಭುಸುಗುಟ್ಟಿದ್ದು.

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಸಿನಿಮಾದಲ್ಲಿ ದೇವರನ್ನು ನೀಲಿ ಬಣ್ಣದಲ್ಲಿ ತೋರಿಸುವ ಉದ್ದೇಶವೇನು?
ದೇವ ಆಕಾಶದಷ್ಟು ಅಗಲ, ಸಮುದ್ರದಷ್ಟು ಆಳ ಎಂದು ಸೂಚಿಸಲು.

■ ರಾಮ್

ಪ್ರಶ್ನೆಯನ್ನು ಕಳಿಸಲು: editorsu@sudha.co.in